ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಈ ದಿನ ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ಚಿಕ್ಕ ಮಗಳೂರು ಜಿಲ್ಲೆಯ ಕಡೂರು, ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ೧೬ ವರ್ಷಕ್ಕೆ ಮೇಲ್ಪಟ್ಟ ಪೆಣ್ಣು ಮಕ್ಕಳು ಕಾಣೆಯಾಗುತ್ತಿದ್ದಾರೆ ಎನ್ನುವ ವಿಚಾರ ಬಂದಿದೆ. ಅವರನ್ನು ಅಪಹರಣ ಮಾಡಿ ಬಾಂಬೆಗೆ ಸಾಗಿಸುತ್ತಿದ್ದಾರೆ ಎಂದು ಅಲ್ಲಿನ ಜಿಲ್ಲಾ ಪೋಲೀಸ್ ಅಧಿಕಾರಿ ಹೇಳಿಕೆ ಕೊಟ್ಟಿರುವುದು ಸಹ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ನಾನು ಇವೊತ್ತು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೇನೆ. ನಾಳೆ ಅದನ್ನು ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯ ಮನವಿ ಮಾಡಿ ಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಎಷ್ಟು ಹೊತ್ತಿಗೆ ಕೊಟ್ಟಿದ್ದೀರಿ, ಬೆಳಿಗ್ಗೆ ೧೦–೦೦ಗಂಟೆಗೆ ಕೊಟ್ಟಿದ್ದೀರಿ. ಈಗ ನಿಯಮ ೩೩೪ರ ಮೇರೆಗಿನ ವಿಷಯಗಳು,

ನಿಯಮ ೩೩೪ರ ಮೇರೆಗೆ

೧. ಸರಕಾರದ ಒಂದೇ ಇಲಾಖೆಯ ಒಂದೇ ವಿಭಾಗದಲ್ಲಿ ನಿರಂತರ ಸೇವೆ ಸಲ್ಲಿಸುವವರ ವರ್ಗಾವಣೆ

ಶ್ರೀ ಜಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚಿನ ವರ್ಗಾವಣೆಯ ಸಂದರ್ಭದಲ್ಲಿ ಸರಕಾರದ ವಿವಿಧ ಇಲಾಖೆಗಳ ನೌಕರರು ತಮ್ಮ ಅಪೇಕ್ಷೆ ಇರಲಿ, ಇಲ್ಲದಿರಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ರಾಜ್ಯದ ದಕ್ಷಿಣ ತುದಿಯಿಂದ ಉತ್ತರದ ಕೊನೆಗೆ, ಪಶ್ಚಿಮದಿಂದ ಪೂರ್ವಕ್ಕೆ ಆಗ್ನೇಯದಿಂದ ವಾಯವ್ಯಕ್ಕೆ, ನೈರುತ್ಯದಿಂದ ಈಶಾನ್ಯಕ್ಕೆ, ನಡುವಿನಿಂದ ಕಡೆಯಭಾಗಕ್ಕೆ, ಈ ಕೊನೆಯಿಂದ ಮತ್ತೆಲ್ಲಿಗೋ ವರ್ಗವಾದ ನಿದರ್ಶನಗಳು ಹಲವಾರು, ಆದರೆ ಆದೇಕೋ ವಿಧಾನ ಸೌಧದಲ್ಲಿ ಕೆಲವು ಕಛೇರಿಗಳ ಕೆಲವು ವಿಭಾಗಗಳಲ್ಲಿರುವ ಕೆಲವುಮಂದಿ ಅನೇಕ ವರ್ಷ ಗಳಿಂದ ಅಲ್ಲಿಯೇ ಇರುವುದು, ಬಡ್ತಿಹೊಂದಿದಾಗ ಸಹಾ ಅವರವರ ಯೋಗ್ಯತೆಗೆ ತಕ್ಕುದಾದ ಕುರ್ಚಿ ಒದಗಿಸಲ್ಪಡುವುದು ಕಂಡು ಬಂದಿದೆ. ಇವರಿಂದ ಆಡಳಿತ ಸುಧಾರಣಾ ಇಲಾಖೆ "ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ" ಒರೆಸಿದಂತಾಗಿದೆ. ಸದಾಸರ್ವದಾ ಸುಣ್ಣದ ಪಾರದಿಂದ ಕಣ್ಣು ಕುರುಡಾಗುವ ಬದಲು ಒಮ್ಮೊಮ್ಮೆ ಆದರೂ ಬೆಣ್ಣೆ ಸವರಿ, ನಿರಂತರ ಹತಭಾಗಿಗಳಾದವರಿಗೆ ನ್ಯಾಯ ದೊರಕಿಸಬೇಕೆಂದೂ. ಆಡಳಿತ ವ್ಯವಸ್ಥೆ 'ನಿಂತ ನೀರಾ' ಗದಂತೆ ನೋಡಿಕೊಳ್ಳಬೇಕೆಂದೂ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ, (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ /ನೌಕರರನ್ನು ಸಾಧಾರಣವಾಗಿ ೫ ವರ್ಷಗಳ ನಂತರ ವರ್ಗಾವಣೆ ಮಾಡಬೇಕೆಂಬ ಪದ್ಧತಿ ರೂಢಿಯಲ್ಲಿದೆ. ಆಂರೆ ಕೆಲವು ಇಲಾಖೆಗಳಲ್ಲಿ ಆದರಲ್ಲೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳಲ್ಲಿ ೫ ವರ್ಷಕ್ಕೂ ಮೀರಿ ಕೆಲವು ನೌಕರರುಗಳನ್ನು ಮುಂದುವರೆಸಲಾಗಿದೆ.

ಆರ್ಥಿಕ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿ / ನೌಕರರು ನಿರ್ವಹಿಸುತ್ತಿರುವ ವಿಷಯಗಳಲ್ಲಿ ಪರಿಣಿತರಾಗಿರುವುದರಿಂದ ಹಾಗೂ ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಗರಿಷ್ಟ ಪರಿಮಿತಿ ಮೀರಿದ್ದರೂ ಸಹ ಅಪರೂಪಗಳನ್ನು ಮುಂದುವರಿಸಬೇಕಾಗಿದೆ. ಈ ವಿಷಯವನ್ನು ಅನೇಕ ಬಾರಿ ಅಧಿಕಾರಿಗಳ ಪಟ್ಟಿಯ ಸಭೆಯಲ್ಲಿ ಚರ್ಚಿಸಲಾಗಿದ್ದು ಈ ಇಲಾಖೆಗಳಲ್ಲಿ ನಿರ್ವಹಿಸುತ್ತಿರುವ ಕೆಲಸವು ವಿಶಿಷ್ಟ ಸ್ವರೂಪದ್ದಾಗಿದ್ದು ಮತ್ತು ಈ ಇಲಾಖೆಗಳಲ್ಲಿ ನಿಯಮಗಳನ್ನು ರಚಿಸಲಾಗುವುದರಿಂದ ಸ್ಮೃತಿ ಶಕ್ತಿ (memory) ಹಾಗೂ ಮುಂದುವರಿಕೆ (continuity) ಅಗತ್ಯವಾಗಿರುತ್ತದೆ. ಇದೆ ಕಾರಣಕ್ಕಾಗಿಯೇ ಇತರೆ ಇಲಾಖೆಗಳಲ್ಲಿಯೂ ಸಹ ಕೆಲವೊಂದು ಅಧಿಕಾರಿ /ನೌಕರರನ್ನು ೫ ವರ್ಷದ ನಂತರವೂ ಮುಂದುವರಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಇಂಥಹ ಅಧಿಕಾರಿ / ನೌಕರರನು ಅವರ ಬಡ್ತಿಯ ನಂತರವೂ ಅದೇ ಇಲಾಖೆ ಶಾಖೆಯಲ್ಲಿ ಲಭ್ಯವಿರುವ ಹುದ್ದೆಗಳಲ್ಲಿ ಮುಂದುವರೆಸಬೇಕಾಗುತ್ತದೆ. ಆದುದರಿಂದ ೫ ವರ್ಷದ ಮಿತಿಯನ್ನು ಪಾಲಿಸಲು ಸಾಧ್ಯವಾಗಿಲ್ಲ.

ಆದಾಗ್ಯೂ ಇಂತಹ ೫ ವರ್ಷಗಳನ್ನು ಮೀರಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ : ನೌಕರರನ್ನು ಬೇರೆ ಇಲಾಖೆಗಳಿಗೆ ಸಾಧ್ಯವಾದ ಮಟ್ಟಿಗೂ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈಗಲೂ ಸಹ ೫ ವರ್ಷ ಅವಧಿ ಮೀರಿರುವ ಅಧಿಕಾರಿ / ನೌಕರರ ವರ್ಗಾವಣೆಗಳನ್ನು ಮಾಡಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಸಚಿವಾಲಯವು ಒಂದೇ ಘಟಕವಾಗಿದ್ದು ಸಚಿವಾಲಯದ ಇಲಾಖೆಗಳ ಮಾಡುವ ವರ್ಗಾವಣೆಗಳು ಆಂತರಿಕ ಕಾರ್ಯ ನಿರ್ವಹಣ ವ್ಯವಸ್ಥೆಯಾಗಿದೆ. ಕ್ಷೇತ್ರ ಇಲಾಖೆಗಳಲ್ಲಿನ ಸಾಮಾನ್ಯ ವರ್ಗಾವಣೆ ನೀತಿಯನ್ನು ಇಲ್ಲಿ ಅನ್ವಯ ಮಾಡುತ್ತಿಲ್ಲ.

೨. ಶ್ರೀರಂಗ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ದುರಸ್ಥಿ ಮಾಡುವುದು

SMT. DAMAYANTHI BOREGOWDA.—The income of the Sriranga patna Town Municipality is very meagro. The roads of this great Tourist centre are hopeless, The traffic is very heavy due to the increasing number of Indian and foreign tourists. Bad roads have resulted in increasing number of accidents. I request the Hon'ble Minister for Public Works to take over the roads as a special case.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—ಸನ್ಮಾನ ಸಾಸಕಿಯವಾದ ಶ್ರೀಮತಿ ದಮಯಂತಿ ಬೋರೇಗೌಡ ಅವರು ಶ್ರೀರಂಗಪಟ್ಟಣದ ಪುರಸಭೆಯ ಆದಾಯವು ಬಹಳ ಕಡಿಮೆ ಇದ್ದು ಹಾಗೂ ರಸ್ತೆಗಳು ಕೆಟ್ಟಿದೆಯೆಂದು, ಇದರಿಂದ ಅಪಘಾತಗಳು ಹೆಚ್ಚಾಗುತ್ತವೆಂದು ತಿಳಿಸುತ್ತಾ, ವಿಶೇಷಪ್ರಕರಣವೆಂದು ಪುರಸಭೆಯ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಬೇಕೆಂದು ಕೋರಿದ್ದಾರೆ.

ಪುರಸಭೆಯ ವ್ಯಾಪ್ತಿಗೆ ಬರುವ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಬರುವುದಿಲ್ಲ. ಆದಾಗ್ಯೂ, ಶ್ರೀರಂಗಪಟ್ಟಣ ತಾಲ್ಲೂಕಿನ ಕೆಲವು ರಸ್ತೆಗಳನ್ನು ಶ್ರೀರಂಗಪಟ್ಟಣದ ಪ್ರವಾಸಿ ಕೇಂದ್ರದ ಪ್ರಾಮುಖ್ಯತೆಯನ್ನು ಗುರುತಿಸಿ, ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಬಹುದೇ ಎಂಬ ಬಗ್ಗೆ ಪರಿಶೀಲಿಸಿ ಮುಂದಿನಕ್ರಮ ತೆಗೆದುಕೊಳ್ಳಲಾಗುವುದು.

(೩) ಬೆಳಗಾಂ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕಾಲರಾ ರೋಗದಿಂದ ಇಬ್ಬರು ಸತ್ತಿರುವ ಬಗ್ಗೆ

SRI K. C. MODGEKAR DESAI.—Sir, it is reported that two persons viz. Smt. Kallawwa Ramu Sanadi aged 60 years and her son Shri Parashram Sanadi aged 35 years have died of cholera at Civil Hospital, Belgaum City on 5th July 1990. They belong to Kadoli village which is 10-15 Km away from Belgaum City which comes in my constituency. This news of cholera has spread panic among the residents of Kadoli and surrounding villages. It is reported that late Kallawwa Sanadi started vomitting and diarrhoea, the symptoms of cholera on 29 th June 1990, she was admitted to the District Hospital, Belgaum. Her son Parashuram attended to his mother and he also was affected by cholera. He was admitted in the I. D. at 10.00, A. M. and died at 10.00 p. m and his mother also died immediately. She suffered Diarrohoa because she consumed contamlnated water.